**All India Radio: Bangalore**
**National Bulletin In Kannada**
**15.10.2025  1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**15.10.2025  1.10 p.m.**

**<><><><>**

ಮುಖ್ಯಾಂಶಗಳು :

1. ಬಿಹಾರ ವಿಧಾನಸಭಾ ಚುನಾವಣೆ ; ಬಿಜೆಪಿ ಕಾರ್ಯಕರ್ತರೊಂದಿಗೆ ಪ್ರಧಾನಿ ಸಂವಾದ ; ಪ್ರತಿಪಕ್ಷಗಳಿಂದ ಸೀಟು ಹಂಚಿಕೆ ಮಾತುಕತೆ
2. ರೈಲ್ವೆ ಆಧುನಿಕರಣದಲ್ಲಿ ಭಾರತ ಗಮನಾರ್ಹ ಪ್ರಗತಿ - ಕೇಂದ್ರ ಸಚಿವ ಅಶ್ವಿನಿ ವೈಷ್ಣವ್
3. ಏಳನೇ ಬಾರಿ ವಿಶ್ವಸಂಸ್ಥೆ ಮಾನವ ಹಕ್ಕುಗಳ ಮಂಡಳಿಗೆ ಭಾರತ ಆಯ್ಕೆ
4. ದೆಹಲಿಯಲ್ಲಿ ದೀಪಾವಳಿ ಹಬ್ಬಕ್ಕೆ ಹಸಿರು ಪಟಾಕಿಗಳ ಮಾರಾಟ ಮತ್ತು ಸುಡುವಿಕೆಗೆ ಸುಪ್ರೀಂಕೋರ್ಟ್ ಅನುಮತಿ
5. ೨೦೨೬ರ ಫಿಫಾ ವಿಶ್ವಕಪ್‌ಗೆ ಅರ್ಹತೆ ಪಡೆದ ಸೌದಿ ಅರೇಬಿಯಾ, ಕತಾರ್

<><><><>

ಪ್ರಧಾನಿ ಮತ್ತು ಬಿಜೆಪಿ ಹಿರಿಯ ನಾಯಕ ನರೇಂದ್ರ ಮೋದಿ ಇಂದು ಪಕ್ಷದ ಬೂತ್ ಮಟ್ಟದ ಕಾರ್ಯಕರ್ತರೊಂದಿಗೆ ಸಂವಾದ ನಡೆಸುವ ಮೂಲಕ ಬಿಹಾರದಲ್ಲಿ ಚುನಾವಣಾ ಪ್ರಚಾರ ಆರಂಭಿಸಲಿದ್ದಾರೆ. ಮೇರಾ ಬೂತ್ ಸಬ್ಸೆ ಮಜ್‌ಭೂತ್ ಅಭಿಯಾನದಡಿಯಲ್ಲಿ ಪಕ್ಷದ ಕಾರ್ಯಕರ್ತರೊಂದಿಗೆ ಪ್ರಧಾನಿ ಸಂವಾದ ನಡೆಸಲಿದ್ದಾರೆ. ಬಿಹಾರ ವಿಧಾನಸಭಾ ಚುನಾವಣೆಗೆ ಬಿಜೆಪಿ ನಿನ್ನೆ ೭೧ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಿತು. ಮತ್ತೊಂದು ಎನ್‌ಡಿಎ ಮಿತ್ರಪಕ್ಷವಾದ ಹಿಂದೂಸ್ತಾನಿ ಅವಾಮ್ ಮೋರ್ಚಾ-ಜಾತ್ಯತೀತ ಕೂಡ ೬ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿತು. ಈ ನಡುವೆ ಪಾಟ್ನಾದಲ್ಲಿಂದು ಐಎನ್‌ಡಿಐ ಮೈತ್ರಿಕೂಟದಲ್ಲಿನ ಸೀಟು ಹಂಚಿಕೆ ಕುರಿತ ಮಾತುಕತೆಗಳು ಒಂದು ತೀರ್ಮಾನಕ್ಕೆ ಬರುವ ಹಾಗೂ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಯಾಗುವ ನಿರೀಕ್ಷೆಯಿದೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಶಕೀಲ್ ಅಹಮ್ಮದ್ ಖಾನ್ ಮಾತನಾಡಿ, ಸೀಟುಗಳ ಕುರಿತ ಒಪ್ಪಂದ ಬಹುತೇಕ ಪೂರ್ಣಗೊಂಡಿದೆ ಎಂದಿದ್ದಾರೆ.

ಮತ್ತೊಂದೆಡೆ, ವಿರೋಧ ಪಕ್ಷದಲ್ಲಿರುವ ಸಿಪಿಐ-ಎಂಎಲ್ ಲಿಬರೇಶನ್, ವಿಧಾನಸಭಾ ಚುನಾವಣೆಗೆ ೧೮ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ೨೪೩ ಸದಸ್ಯ ಬಲದ ಬಿಹಾರ ವಿಧಾನಸಭೆಗೆ ಮುಂದಿನ ತಿಂಗಳು ೬ ಮತ್ತು ೧೧ ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಮತ ಎಣಿಕೆ ನವೆಂಬರ್ ೧೪ ರಂದು ನಡೆಯಲಿದೆ.

<><><>

ಮುಂಬರುವ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಹಣದ ಪ್ರಬಾವವನ್ನು ತಡೆಗಟ್ಟಲು ಕಟ್ಟುನಿಟ್ಟಿನ ನಿಗಾ ವಹಿಸುವಂತೆ ಭಾರತೀಯ ಚುನಾವಣಾ ಆಯೋಗ ಜಾರಿ ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ. ಚುನಾವಣಾ ಪ್ರಕ್ರಿಯೆಯ ಮೇಲ್ವಿಚಾರಣೆ ಮಾಡಲು ವೆಚ್ಚ ವೀಕ್ಷಕರನ್ನು ನಿಯೋಜಿಸಲಾಗಿದೆ ಎಂದು ಆಯೋಗ ತಿಳಿಸಿದೆ.  ಅಕ್ಟೋಬರ್ ೬ರಂದು ಚುನಾವಣೆ ಘೋಷಣೆಯಾದಗಿನಿಂದ ವಿವಿಧ ಜಾರಿ ಸಂಸ್ಥೆಗಳು ಒಟ್ಟು ೩೩.೯೭ ಕೋಟಿ ರೂಪಾಯಿ ಮೌಲ್ಯದ ನಗದು, ಮದ್ಯ, ಮಾದಕ ವಸ್ತುಗಳು ಹಾಗೂ ಉಚಿತ ವಸ್ತುಗಳನ್ನು ವಶಪಡಿಸಿಕೊಂಡಿದೆ ಎಂದು ಆಯೋಗ ಮಾಹಿತಿ ನೀಡಿದೆ.  ಹಣ ಉಚಿತ ವಸ್ತುಗಳು ಸೇರಿ ಇನ್ನಿತರ ವಸ್ತುಗಳ ಮೂಲಕ ಆಮಿಷ ಒಡ್ಡಿ ಚುನಾವಣೆ ಮೇಲೆ ಪ್ರಭಾವ ಬೀರುವುದನ್ನು ತಡೆಯುವಂತೆ ಆಯೋಗ, ರಾಜ್ಯ ಪೊಲೀಸ್ ಇಲಾಖೆ, ಅಬಕಾರಿ ಇಲಾಖೆ, ಆದಾಯ ತೆರಿಗೆ ಇಲಾಖೆ, ಆರ್‌ಬಿಐ, ಕಸ್ಟಮ್ಸ್ ಸೇರಿದಂತೆ ಎಲ್ಲಾ ಜಾರಿ ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ.

<><><>

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ರೈಲ್ವೆ ಆಧುನೀಕರಣದಲ್ಲಿ ಭಾರತ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆದ ೧೬ನೇ ಅಂತಾರಾಷ್ಟ್ರೀಯ ರೈಲ್ವೆ ಸಲಕರಣೆಗಳ ಪ್ರದರ್ಶನ ಐಆರ್‌ಇಇ ಯಲ್ಲಿ ಮಾತನಾಡಿದ ಅವರು, ಕಳೆದ ೧೧ ವರ್ಷಗಳ ಫಲಿತಾಂಶಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ, ಈ ಅವಧಿಯಲ್ಲಿ ೩೫ ಸಾವಿರ ಕಿಲೋಮೀಟರ್ ಹೊಸ ರೈಲು ಹಳಿಗಳನ್ನು ನಿರ್ಮಿಸಲಾಗಿದೆ. ಹಾಗೂ ೪೬ ಸಾವಿರ ಕಿಲೋಮೀಟರ್ ವಿದ್ಯುದೀಕರಣ ಮಾಡಲಾಗಿದೆ. ಜೊತೆಗೆ ೪೦ ಸಾವಿರ ಹೊಸ ಬೋಗಿಗಳನ್ನು  ತಯಾರಿಸಲಾಗಿದೆ. ಈ ಸಾಧನೆ ರೈಲ್ವೆ ಮೂಲಸೌಕರ್ಯ ಮತ್ತು ತಂತ್ರಜ್ಞಾನಗಳಲ್ಲಿ ಭಾರತದ ಬೆಳೆಯುತ್ತಿರುವ ಸಾಮರ್ಥ್ಯವನ್ನು ಪ್ರದರ್ಶಿಸುತ್ತದೆ ಎಂದರು. ಮೊದಲ ಬುಲೆಟ್ ಟ್ರೈನ್

ಯೋಜನೆ ಕುರಿತು ಮಾತನಾಡಿದ ಅವರು, ಅದರ ನಿರ್ಮಾಣಕಾರ್ಯ ವೇಗವಾಗಿ ನಡೆಯುತ್ತಿದ್ದು ಈಗಾಗಲೇ ೩೨೫ ಕಿಲೋಮೀಟರ್ ಪೂರ್ಣಗೊಳಿಸಲಾಗಿದೆ ಎಂದರು.

ಧ್ವನಿ : ಅಶ್ವಿನಿ ವೈಷ್ಣವ್, ಕೇಂದ್ರ ರೈಲ್ವೆ ಸಚಿವ ( ೨೮ ಸೆಕೆಂಡುಗಳು)

<><><><>

ಮುಂದಿನ ವರ್ಷದಿಂದ ಪ್ರಾರಂಭವಾಗಿ ಮೂರು ವರ್ಷಗಳ ಅವಧಿಗೆ ಭಾರತವು ಏಳನೇ ಬಾರಿಗೆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಮಂಡಳಿಗೆ ಅವಿರೋಧವಾಗಿ ಆಯ್ಕೆಯಾಗಿದೆ. ವಿಶ್ವಸಂಸ್ಥೆ ಸಾಮಾನ್ಯ ಸಭೆ ಭಾರತದ ಆಯ್ಕೆ ಕುರಿತು ಘೋಷಿಸಿದ ನಂತರ ವಿಶ್ವಸಂಸ್ಥೆ ಖಾಯಂ ಪ್ರತಿನಿಧಿ - ಪಿ.ಹರೀಶ್, ಈ ಆಯ್ಕೆ ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯಗಳಿಗೆ ಭಾರತದ ಅಚಲ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದರು. ಸಾಮಾಜಿಕ ಮಾಧ್ಯಮದಲ್ಲಿ ಅವರು, ಇದೇ ಧ್ಯೇಯದ ಸಾಕಾರಕ್ಕೆ ಶ್ರಮಿಸಲು ಭಾರತ ಎದುರು ನೋಡುತ್ತದೆ ಎಂದು ತಿಳಿಸಿದ್ದಾರೆ. ಮಾನವ ಹಕ್ಕುಗಳ ಮಂಡಳಿಯು ೪೭ ಸದಸ್ಯರನ್ನು ಒಳಗೊಂಡ ವಿಶ್ವಸಂಸ್ಥೆಯ ಪ್ರಮುಖ ಸಂಸ್ಥೆಯಲ್ಲೊಂದಾಗಿದೆ. ಇದು ವಿಶ್ವಾದ್ಯಂತ ಮಾನವ ಹಕ್ಕುಗಳನ್ನು ಉತ್ತೇಜಿಸಿ, ರಕ್ಷಿಸುವ ಜೊತೆಗೆ ಸದಸ್ಯ ರಾಷ್ಟ್ರಗಳಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸುತ್ತದೆ. ಈ ಸಂಸ್ಥೆ ಸಮಸ್ಯೆಗಳನ್ನು ಚರ್ಚಿಸಲು ಒಂದು ವೇದಿಕೆಯಾಗಿದೆ.

<><><><>

ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದಲ್ಲಿ ಇದೇ ೧೮ರಿಂದ ೨೧ರವರೆಗೆ ಬೆಳಿಗ್ಗೆ ೬-೭ ಗಂಟೆಯಿಂದ ರಾತ್ರಿ ೮ ರಿಂದ ೧೦ ಗಂಟೆಯ ವರೆಗೆ ಹಸಿರು ಪಟಾಕಿಗಳ ಮಾರಾಟ ಮತ್ತು ಸುಡುವಿಕೆಗೆ ಸುಪ್ರೀಂಕೋರ್ಟ್ ಸೀಮಿತ ಸಮಯದೊಂದಿಗೆ ಅನುಮತಿ ನೀಡಿದೆ. ಹಬ್ಬಗಳ ಆಚರಣೆ ಮತ್ತು ಪರಿಸರ ಸಂರಕ್ಷಣೆ ನಡುವೆ ಸಮತೋಲಿತ ವಿಧಾನವನ್ನು ನ್ಯಾಯಾಲಯ ಅನುಸರಿಸಿದೆ. ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಮತ್ತು ನ್ಯಾಯಮೂರ್ತಿ ಕೆ. ವಿನೋದ್ ಚಂದ್ರನ್ ಅವರಿದ್ದ ಪೀಠ ಮಾಲಿನ್ಯ ತಡೆಯುವ ಪ್ರಯತ್ನಗಳೊಂದಿಗೆ ಸಾಗಲು ಸಾಧ್ಯವೇ ಎಂಬುದನ್ನು ನಿರ್ಣಯಿಸಲು ಈ ಆದೇಶ ತಾತ್ಕಾಲಿಕ ಕ್ರಮವಾಗಿದೆ ಎಂದು ತಿಳಿಸಿದೆ. ಇದೇ ಅವಧಿಯಲ್ಲಿ ಗಾಳಿ ಮತ್ತು ನೀರಿನ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡಲು ಹಾಗೂ ದೆಹಲಿಯ ಗಾಳಿಯ ಮೇಲೆ ಪಟಾಕಿಗಳ ಪರಿಣಾಮದ ಕುರಿತು ವರದಿ ಸಲ್ಲಿಸಲು ನ್ಯಾಯಾಲಯ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ರಾಜ್ಯಮಂಡಳಿಗಳಿಗೆ ನಿರ್ದೇಶಿಸಿದೆ.

<><><>

ಖ್ಯಾತ ವಿಜ್ಞಾನಿ, ಮಾಜಿ ರಾಷ್ಟ್ರಪತಿ ಭಾರತ ರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಜನ್ಮ ದಿನಾಚರಣೆಯ ದಿನವಾದ ಇಂದು ಅವರಿಗೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಗೌರವ ನಮನ ಸಲ್ಲಿಸಿದ್ದಾರೆ. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಉಪರಾಷ್ಟ್ರಪತಿ, ಡಾ. ಅಬ್ದುಲ್ ಕಲಾಂ ಒಬ್ಬ ದಾರ್ಶನಿಕ ವಿಜ್ಞಾನಿ, ಸ್ಫೂರ್ತಿದಾಯಕ ನಾಯಕ ಹಾಗೂ ನಿಜವಾದ ದೇಶಭಕ್ತರಾಗಿದ್ದರು. ಅವರ ವಿನಯತೆ, ವಿದ್ಯಾರ್ಥಿಗಳೊಂದಿಗಿನ ನಿರಂತರ ಸಂವಾದದಿಂದ ಅವರು ಪೀಳಿಗೆಗಳಾದ್ಯಂತ ಪ್ರೀತಿಗೆ ಪಾತ್ರರಾಗಿದ್ದಾರೆ ಎಂದು ಸ್ಮರಿಸಿದ್ದಾರೆ. ಸಾಮಾಜಿಕ ಮಾಧ್ಯಮ ಸಂದೇಶದಲ್ಲಿ ಪ್ರಧಾನಿ, ಡಾ. ಕಲಾಂ ಯುವ ಮನಸ್ಸುಗಳನ್ನು ಬೆಳಗಿಸಿ, ದೇಶ ದೊಡ್ಡ ಕನಸು ಕಾಣುವಂತೆ ಪ್ರೇರೇಪಿಸಿದ ದಾರ್ಶನಿಕರಾಗಿದ್ದರು ಎಂದು ತಿಳಿಸಿದ್ದಾರೆ.

<><><>

ಕಿನ್ಯಾದ ಮಾಜಿ ಪ್ರಧಾನಿ ರೈಲಾ ಒಡಿಂಗಾ ಇಂದು ಬೆಳಿಗ್ಗೆ ಕೇರಳದ ಕೊತಟ್ಟುಕುಳಂ ನಲ್ಲಿ ನಿಧನರಾಗಿದ್ದಾರೆ. ಅವರಿಗೆ ೮೦ ವರ್ಷ ವಯಸ್ಸಾಗಿತ್ತು. ಆಯುರ್ವೇದ ಚಿಕಿತ್ಸೆಗಾಗಿ ಕೇರಳದಲ್ಲಿದ್ದ ಅವರು, ಹೃದಯಾಘಾತದಿಂದ ಹಠಾತ್ತನೆ ಕುಸಿದು ಬಿದ್ದರು. ತಕ್ಷಣ ಅವರನ್ನು ಶ್ರೀಧಾರಿಯಂ ಆಯುರ್ವೇದ ಕಣ್ಣಿನ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಕ್ಕೆ ಕರೆದೊಯ್ಯಲಾಯಿತಾದರೂ, ಬದುಕುಳಿಸಲು ಸಾಧ್ಯವಾಗಲಿಲ್ಲ. ಕಿನ್ಯಾ ರಾಜಕೀಯದಲ್ಲಿ ೪ ದಶಕಗಳಿಂದ ಸಕ್ರಿಯರಾಗಿದ್ದ ಅವರು, ಪ್ರಧಾನಿಯಾಗಿ ೨೦೦೮ರಿಂದ ೨೦೧೩ರವರೆಗೆ ನಿರ್ಣಾಯಕ ಸಮಯದಲ್ಲಿ ಸೇವೆ ಸಲ್ಲಿಸಿದರು.

<><><>

ಸೈಬರ್ ಮೂಲಕ ನಡೆಸಲಾದ ದೊಡ್ಡ ಪ್ರಮಾಣದ ಸಂಘಟಿತ ಅರೆಕಾಲಿಕ ಉದ್ಯೋಗ ಮತ್ತು ಹೂಡಿಕೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ತನಿಖಾ ದಳ-ಸಿಬಿಐ, ಕರ್ನಾಟಕ, ತಮಿಳುನಾಡು ಮತ್ತು ಕೇರಳದಾದ್ಯಂತ ಹಲವಾರು ಸ್ಥಳಗಳಲ್ಲಿ ಶೋಧ ನಡೆಸಿದೆ. ಆಪರೇಷನ್ ಚಕ್ರ ಅಡಿಯಲ್ಲಿ ನಡೆಸಲಾದ ಕಾರ್ಯಾಚರಣೆಯ ಸಂದರ್ಭದಲ್ಲಿ, ನಿನ್ನೆ ಮೂವರನ್ನು ಬಂಧಿಸಲಾಗಿದೆ.

<><><>

ಸೌದಿ ಅರೇಬಿಯಾ ಮತ್ತು ಕತಾರ್ ೨೦೨೬ರ ಫಿಫಾ ವಿಶ್ವಕಪ್‌ಗೆ ಅರ್ಹತೆ ಪಡೆದಿವೆ. ಜೆಡ್ಡಾದಲ್ಲಿ ನಡೆದ ಪಂದ್ಯದಲ್ಲಿ ಇರಾಕ್ ವಿರುದ್ಧ ಸೌದಿ ಅರೇಬಿಯಾ ೦-೦ ಯಿಂದ ಡ್ರಾ ಸಾಧಿಸಿ, ಏಷ್ಯನ್ ಅರ್ಹತಾ ಸುತ್ತಿನ ಪಂದ್ಯದಲ್ಲಿ ಗ್ರೂಪ್ ಬಿ ಯಲ್ಲಿ ಅಗ್ರಸ್ಥಾನ ಗಳಿಸಿದೆ. ದೋಹಾದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಕತಾರ್ ಯುನೈಟೆಡ್ ಅರಬ್ ಎಮಿರೇಟ್ಸ್ ತಂಡವನ್ನು ೨-೧

ಗೋಲುಗಳಿಂದ ಸೋಲಿಸುವ ಮೂಲಕ ಅರ್ಹತೆ ಪಡೆದುಕೊಂಡಿದೆ. ಈ ಮೂಲಕ ಕತಾರ್‌ನ ಸತತ ಎರಡನೇ ಬಾರಿಗೆ ವಿಶ್ವಕಪ್ ಗೆ ಪ್ರವೇಶ ಪಡೆದಿದೆ.

<><><><>

ಕೊಲಂಬೊದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಐಸಿಸಿ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಇಂಗ್ಲೆಂಡ್ ಹಾಗೂ ಪಾಕಿಸ್ತಾನ ವನಿತೆಯರ ತಂಡಗಳು ಮುಖಾಮುಖಿಯಾಗಲಿವೆ.

ಪಂದ್ಯ ಭಾರತೀಯ ಕಾಲಮಾನ ೩ ಗಂಟೆಗೆ ಆರಂಭವಾಗಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>